

(20ನೇ ಪುಟದಿಂದ)

ಗಡ್ಡ ಬಿಡುವುದಕ್ಕೂ, ವಾಲ್ಮೀಕಿ, ವ್ಯಾಸರ ಗಡ್ಡಕ್ಕೂ ಸಾವಯವ ಸಂಬಂಧ ಇದ್ದಿರಲೂಬಹುದು. 'ಗಡ್ಡ ಎಳೆದವನ ಬಾಯಿಗೊಂದು ಮಿಠಾಯಿ' ಎಂಬ ಬೀರಬಲ್ಲನ ಕಥೆ ದಾಡಿ ಮಹಿಮೆಯನ್ನು ಸಾರುತ್ತದೆ. ಮೌಲ್ವಿಗಳು, ಸ್ವಾಮೀಜಿಗಳು ಕಣ್ಣುಮುಚ್ಚಿ ಗಡ್ಡ ನೀವಿಕೊಂಡರೆ ಅದು ಅಧ್ಯಾತ್ಮ ಚಿಂತನೆಯ ಕೆಮಿಸ್ಟ್ರಿ. ಅದೇ ಸಿನಿಮಾದ ಖಳನಾಯಕ ಗಡ್ಡದ ಮೇಲೆ ಕೈಯಾಡಿಸಿದರೆ ಅದು ಪೋಲಿತನದ ಸಂಕೇತ.

ಯುರೋಪ್‌ನಲ್ಲಿ ಜನನಾಯರ ಗಡ್ಡ, ಮೀಸೆ ಪ್ರಜೆಗಳ ಫ್ಯಾಷನ್‌ಗೆ ಪ್ರೇರಣೆಯಾದರೆ, ಭಾರತದಲ್ಲಿ ಮನರಂಜನೆಯ ಮಾಧ್ಯಮ ಪ್ರೇರಣೆ. ಅದರಲ್ಲೂ ಸಿನಿಮಾ ನಾಯಕರ ಶೈಲಿ ಅನುಕರಿಸುವ ಪಡ್ಡೆ ಹೈಕಳ ಸಂಖ್ಯೆ ಹೆಚ್ಚು. ಕ್ಲೀನ್ ಶೇವ್ಡ್ ಶಾರುಖ್ ಖಾನ್ ಬಂದಾಗ ಅವನಂತಾಗ ಬಯಸಿದರು. ಕುರುಚಲು ಗಡ್ಡದ ಹೃತಿಕ್ ರೋಷನ್ ಬಂದಾಗ ಅವನಂತೆ ಆಗಲು ಯತ್ನಿಸಿದರು. ಅಮೀರ್ ಖಾನ್ 'ಗೋಟಿ' (ಕೆಳದುಟಿಯ ಕೆಳಭಾಗದಲ್ಲಿರುವ ಹೋತದ ಗಡ್ಡದಂಥ ಕೂದಲು) ಬಿಟ್ಟಾಗ 'ಅರೆ, ಸೂಪರ್' ಎಂದರು.

ಕ್ಲೀನ್ ಶೇವ್ ಮಾಡಿಕೊಳ್ಳುವ ಶೋಕಿ ಜಾಗತಿಕ ಮಟ್ಟದಲ್ಲಿ ವ್ಯಾಪಿಸಿದ್ದು ಹದಿನೈದನೇ ಶತಮಾನದಲ್ಲಿ. ಹದಿನಾರನೇ ಶತಮಾನದಲ್ಲಿ ಜಾನ್ ನಾಕ್ಸ್, ಬಿಷಪ್ ಗಾರ್ಡಿನರ್ ಹಾಗೂ ಥಾಮಸ್ ಕ್ರ್ಯಾನ್ಮರ್ ಉದ್ದುದ್ದ ಗಡ್ಡ ಬಿಟ್ಟ ಸಿದ್ಧಪುರುಷರಾದ ಮೇಲೆ ಅವರ ಅಭಿಮಾನಿಗಳೂ ಶೇವ್ ಮಾಡುವುದನ್ನು ನಿಲ್ಲಿಸಿದರು.

ನೆಪೋಲಿಯನ್ ಯುಗದಲ್ಲೂ ದಾಡಿಗಳು ಮೆರೆದಾಡಿದವು. ಗಡ್ಡದ ಮೇಲೆ ಹಸಿರು ಕೂದಲು ಮೂಡದಂತೆ ನೋಡಿಕೊಳ್ಳುವುದು ಆ ಕಾಲಘಟ್ಟದ ಫ್ಯಾಷನ್ನೂ ಹೌದು, ಸವಾಲೂ ಹೌದು. ರಷ್ಯಾದ ಮೂರನೇ ಅಲೆಗ್ಸಾಂಡರ್, ಫ್ರಾನ್ಸ್‌ನ ಮೂರನೇ ನೆಪೋಲಿಯನ್, ಜರ್ಮನಿಯ ಮೂರನೇ ಫ್ರೆಡ್ರಿಕ್ ಗಡ್ಡ ನೀವಿಕೊಂಡ ಮೇಲೆ ಪ್ರಜೆಗಳೂ ಪ್ರಭುಗಳಂತಾದರು. ಸಾಂಸ್ಕೃತಿಕ ಹಾಗೂ ರಾಜಕಾರಣ ಕ್ಷೇತ್ರಗಳ ದಿಗ್ಗಜರನ್ನು ಅನುಕರಿಸುವವರೂ ಇದ್ದರು. ಬೆಂಜಮಿನ್ ದಿಸ್ರೇಲಿ, ಚಾರ್ಲ್ಸ್ ಡಿಕನ್ಸ್, ಕಾರ್ಲ್ ಮಾರ್ಕ್ಸ್ ಮೊದಲಾದವರ ದಾಡಿ ಅನೇಕರಿಗೆ ಮಾದರಿಯಾದದ್ದೂ ಹೌದು.








ರಾಜರ ಹುಕಿಗೆ ತಕ್ಕಂತೆ ಬದಲಾಗುತ್ತಾ ಬಂದ ದಾಡಿ ಅವತಾರಗಳು ಆಧುನಿಕ ಜಗತ್ತಿನಲ್ಲಿ ಫ್ಯಾಷನ್‌ನ ಭಾಗವಾದವು. ಗಲ್ಲದ ಮೇಲಷ್ಟೆ ಇರುವ ಹೋತದ ಗಡ್ಡ, ಕಿವಿಯ ಪಕ್ಕದಲ್ಲಿ ಪೊದೆಯಂತೆ ಕಾಣುವ ಸೈಡ್‌ಬರ್ನ್, ಕೆನ್ನೆಯ ಕೊನೆಗಷ್ಟೇ ಮುಗಿದುಹೋಗುವ ಚಿನ್‌ಸ್ಟ್ರಾಪ್, ಮೀಸೆಯನ್ನೂ ಒಳಗೊಂಡು ಬೆಳೆದ ಗಾರಿಬಾಲ್ಡಿ, ಅಮೀರ್ ಖಾನ್ ಹಂಚಿದ ಗೋಟಿ, ತೆಳುವಾದ ಗೆರೆಯಂಥ ರಾಯಲ್, ಮೀಸೆಯನ್ನೂ ಕೆಳತುಟಿಯ ಕೆಳಭಾಗದ ಕೂದಲನ್ನೂ ಸೇರಿಸಿಕೊಂಡ ಜುಂಕೋ– ಇವೆಲ್ಲಾ ದಾಡಿಯ ಬಗೆಗಳು. ಎಲ್ಲವೂ ಇಂದಿಗೂ ಚಾಲ್ತಿಯಲ್ಲಿವೆ. ಅಂದ ಹಾಗೆ, ಮಾಲ್‌ನ ಮುಂದೆ ಪರದೇಶಿ ಕಥೆಗಳನ್ನು ಹೇಳಿದ ವ್ಯಕ್ತಿ ಬಿಟ್ಟಿದ್ದ ಗಡ್ಡದ ಹೆಸರು 'ಸ್ಯಾಷ್‌ಬರ್ನ್ಸ್'. ಈಗ ನೀವೂ ನಿಮ್ಮ ದಾಡಿ ನೀವಿಕೊಳ್ಳಿ!